ಆ) ಬಂದಿದ್ದಲ್ಲಿ ಯಾವಾಗ ಈ ಬಸ್‌ನಿಲ್ದಾಣಗಳನ್ನು ನಿರ್ಮಿಸಲಾಗುವುದು?

ಶ್ರೀ ಸಿ.ಆರ್.ಸಗೀರ್ ಅಹ್ಮದ್ (ಸಾರಿಗೆ ಸಚಿವರು):

ಅ) ಹೌದು

ಆ) ನರಗುಂದ ತಾಲ್ಲೂಕಿನ ಯಾವಗಲ್ ಹಾಗೂ ಶಿರೋಳ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಕುರಿತು ಇದುವರೆಗೆ ಸೂಕ್ತ ಜಮೀನು ದೊರಕಿರುವುದಿಲ್ಲ. ದೊರಕಿದ ನಂತರ ಬಸ್ ನಿಲ್ದಾಣ ನಿರ್ಮಾಣದ ಬಗ್ಗೆ ನಿರ್ಧರಿಸಲಾಗುವುದು.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೇ, ಉತ್ತರ ಸರಿಯಾಗಿಲ್ಲ. ಎರಡು ಬಸ್ ನಿಲ್ದಾಣಗಳ ಬಗ್ಗೆ ನಾನು ಕೇಳಿದ್ದೇನೆ. ಇಲ್ಲಿ ಜಾಗ ಇಲ್ಲ ಎನ್ನುವಂತಹ ಉತ್ತರವನ್ನು ತಾವು ಕೊಟ್ಟಿದ್ದೀರಿ. ಆ ಜಾಗಗಳಿಗೆ ತಮ್ಮ ಇಲಾಖಾಧಿಕಾರಿಗಳು ಬಂದು ಹೋಗಿದ್ದಾರೆ. ಆ ಜಾಗವನ್ನು ಪಡೆದುಕೊಂಡು ಆದಷ್ಟು ಬೇಗ ಬಸ್‌ನಿಲ್ದಾಣವನ್ನು ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಹೇಳಿದ್ದೇನೆ. ನರಗುಂದ್ ತಾಲ್ಲೂಕಿನ ಯಾವಗಲ್ ಗ್ರಾಮದಲ್ಲಿ ಹಾಗೂ ಶಿರೋಳ್ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸುವ ಕುರಿತು ಇದುವರೆಗೂ ಸೂಕ್ತ ಜಮೀನು ದೊರಕಿರುವುದಿಲ್ಲ. ಜಮೀನು ದೊರಕಿದ ನಂತರ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು ಎಂದು. ಮಾನ್ಯ ಶಾಸಕರ ಪ್ರಯತ್ನದಿಂದ ಆ ಜಾಗ ಒದಗಿಸಿಕೊಟ್ಟಲ್ಲಿ ನಾವು ಆ ಬಸ್ ನಿಲ್ದಾಣದ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆ.

ಮಂಗಳೂರು ತಾಲ್ಲೂಕು ಕಾಟಪಳ್ಳಿ ಪುನರ್‌ವಸತಿ ಕೇಂದ್ರದ ಬಗ್ಗೆ.

314(3085)

ಶ್ರೀ ವಿಜಯ ಕುಮಾರ್ ಶೆಟ್ಟಿ(ಸುರತ್‌ಕಲ್): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಗಳೂರು ತಾಲ್ಲೂಕು ಕಾಟಪಳ್ಳಿ ನಿರ್ವಸಿತರ ಪುನರ್‌ವಸತಿ ಕೇಂದ್ರದಲ್ಲಿ ವಸತಿ ನಿರ್ಮಾಣಕ್ಕಾಗಿ ಇಲಾಖೆ ನೀಡಿರುವ ನೆರವು ಸಹಕಾರ ಸಂಸ್ಥೆಗಳ ಮೂಲಕ ನೀಡಿರುವ ಸಾಲದ ಮೊತ್ತವೆಷ್ಟು?

2. ಮೇಲ್ಕಂಡ ಸಾಲವನ್ನು ಮನ್ನಾ ಮಾಡಲು ಸರ್ಕಾರ ಯೋಚಿಸಿದೆಯೇ?

3. ಹಾಗಿದ್ದಲ್ಲಿ ಸಾಲವನ್ನು ಎಂದು ಮನ್ನಾ ಮಾಡುವುದು?

ಶ್ರೀ ಡಿ.ಕೆ.ಶಿವಕುಮಾರ್ (ಸಹಕಾರ ಸಚಿವರು):

1. ಕಾಟಪಳ್ಳಿ ನಿರ್ವಸಿತರ ಕೇಂದ್ರದಲ್ಲಿ ವಸತಿ ನಿರ್ಮಾಣಕ್ಕಾಗಿ ಪಣಂಬೂರು ವಿವಿಧೋದ್ದೇಶ ಸಹಕಾರ ಸಂಘ ನಿಯಮಿತದ ಮೂಲಕ ರೂ. 18.00 ಲಕ್ಷ ಸಾಲ ನೀಡಲಾಗಿದೆ.

2. ಮೇಲ್ಕಂಡ ಸಾಲದ ಪೈಕಿ ಸರ್ಕಾರಕ್ಕೆ ಪಾವತಿಸಲು ಬಾಕಿ ಇದ್ದ ಅಸಲು ರೂ. 17.40 ಲಕ್ಷ ಮತ್ತು ಬಡ್ಡಿ ರೂ. 25.44 ಲಕ್ಷವನ್ನು ಸರ್ಕಾರದ ದಿನಾಂಕ: 5-6-93ರ ಆದೇಶದಲ್ಲಿ ಮನ್ನಾ ಮಾಡಲಾಗಿದೆ.

3. ಈಗಾಗಲೇ ಮನ್ನಾ ಮಾಡಿರುವುದರಿಂದ ಉದ್ಭವಿಸುವುದಿಲ್ಲ.

ಶ್ರೀ ಕೆ.ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ನವ ಮಂಗಳೂರು ಬಂದರು ನಿರ್ವಸಿತವಾಗುವಂತಹ ಸಂದರ್ಭದಲ್ಲಿ ಎರಡು ಸೊಸೈಟಿಗಳು ಇದ್ದವು. ಒಂದು ಪಣಂಬೂರು ವಿವಿಧೋದ್ದೇಶ ಸಹಕಾರ ಸಂಘ ಮತ್ತು ಕರ್ನಾಟಕ ಹೌಸಿಂಗ್ ಬೋರ್ಡ್ ಮತಿಯಿಂದ 1968ರಲ್ಲಿ ನಿರ್ವಸಿತರಾಗುವವರಿಗೆ ಮನೆ ಕಟ್ಟಲಿಕ್ಕೋಸ್ಕರವಾಗಿ ಲೋನ್ ಕೊಟ್ಟಿದ್ದಾರೆ. 2500 ರೂ ಗಳಿಂದ 4 ಸಾವಿರ ರೂಪಾಯಿಗಳವರೆಗೂ ಲೋನ್ ಕೊಟ್ಟಿದ್ದಾರೆ. ಈಗ ಅದು ಬಡ್ಡಿ ಜಾಸ್ತಿಯಾಗಿದೆ. ವಿವಿಧೋದ್ದೇಶ ಸಹಕಾರ ಸಂಘದ ಸಾಲ ಸಂಪೂರ್ಣವಾಗಿ ಮನ್ನಾ ಮಾಡಿದ್ದಾರೆ. ನಮ್ಮ ಹಿಂದಿನ ಸರ್ಕಾರದಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಸಂಪೂರ್ಣ ಮನ್ನಾ ಮಾಡಲಾಗಿದೆ. ಅದು ಸುಮಾರು 600 ಜನಕ್ಕಿಂತ ಹೆಚ್ಚು ಜನರ ಸಾಲ ಮನ್ನಾ ಮಾಡಲಾಗಿದೆ. ಈಗ ಬಾಕಿ ಇರುವಂಥಾದ್ದು 140 ಜನ. ಅಲ್ಲಿರುವವರು ಕಡು ಬಡವರು. ಈ ದೇಶದ ಅಭಿವೃದ್ಧಿಯ ದ್ಯೋತಕದಂತಿರುವ ನವ ಮಂಗಳೂರು ಬಂದರಿಗೆ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿದಂತಹ ಜನರ ಈ ಒಂದು ಸಣ್ಣ ಕೇಳಿಕೆಯನ್ನು ತಾವು ನೆರವೇರಿಸಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಈಗಾಗಲೇ ಇಲಾಖೆಯ ಅಧಿಕಾರಿಗಳು ಬಂದು ಬಹಳಷ್ಟು ಕಿರುಕುಳ ಕೊಡುತ್ತಿದ್ದಾರೆ. ಆದ್ದರಿಂದ ಸಾಧ್ಯವಾದಷ್ಟು ಶೀಘ್ರದಲ್ಲಿಯೇ ಒಂದು ಸುತ್ತೋಲೆಯನ್ನು ಕೊಟ್ಟು ನಾಲ್ಕು ಸಾವಿರ ಲೋನ್ ಏನು ಇದೆ ಸುಮಾರು 140 ಜನರದ್ದು ಅದನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ನಾನು ನಿರ್ವಸಿತರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ(ವಸತಿ ಸಚಿವರು): ಮಾನ್ಯ ಅಧ್ಯಕ್ಷರೇ, ಮನ್ನಾ ಮಾಡಲಿಕ್ಕೆ ಹೋದರೆ ಏನೂ ಪ್ರಯೋಜನ ಇಲ್ಲ. ನಾನು ಪ್ರೊವಿಷನಲ್ ಕಾಸ್ಟ್ ಮತ್ತು ಫೈನಲ್ ಕಾಸ್ಟ್

ಎಂದು ಒಂದು ಸ್ಕೀಮ್ ಮಾಡಿದ್ದೇವೆ. ಅದು ಜಾರಿಯಲ್ಲಿದೆ. ಆ ಸ್ಕೀಮ್‌ನ ಪ್ರಕಾರ ಎಲ್.ಐ.ಜಿ.ಗೆ 30 ಪರ್ಸೆಂಟ್ ಎಂ.ಐ.ಜಿಗೆ 20 ಪರ್ಸೆಂಟ್.....

ಶ್ರೀ ಕೆ ವಿಜಯಕುಮಾರ್ ಶೆಟ್ಟಿ: ಮಾನ್ಯ ಮಂತ್ರಿಗಳೇ, ಇದು ಎಲ್‌ಐಜಿ ಅಲ್ಲ. ಆ ನಿರ್ವಸಿತರಿಗೆ 2500 ರೂಪಾಯಿ ಲೋನ್ ಕೊಟ್ಟದ್ದು.

ಶ್ರೀ ಖಮರುಲ್ಲಾ ಇಸ್ಲಾಂ: ಅದೇ ತರಹ ಕ್ಯಾಷ್ ಲೋನ್ ಸ್ಕೀಮ್ ಇದೆ. ಎರಡೂ ಸ್ಕೀಮ್‌ಗೆ ಆಗಸ್ಟ್ 31 ಲಾಸ್ಟ್ ಡೇಟ್ ಇತ್ತು. ಅದನ್ನು ನಾವು ಅಕ್ಟೋಬರ್ 31ರವರೆಗೂ ವಿಸ್ತರಣೆ ಮಾಡಿದ್ದೇವೆ. Whatever cash loan is taken, that is only in that scheme. Separately there is no provision to waive of the interest. Anyhow, whatever you have put forth before me, I will consider it seriously as to what best I can do

ಶ್ರೀ ಕೆ.ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಇದಕ್ಕೆ ಇರುವಂಥಾದ್ದು ಏನು? ಅವರು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೋಸ್ಕರ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಕಳೆದುಕೊಂಡವರು. ಇಂತಹ ಒಂದು ಕೇಸ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಇರಲಿಕ್ಕೆ ಇಲ್ಲ ಆದ್ದರಿಂದ ನನ್ನ ಒಂದು ಒತ್ತಾಯ ಏನೆಂದರೆ ಕೇವಲ ಎರಡೂವರೆ ಸಾವಿರ ರೂಪಾಯಿ ಲೋನ್ ಕೊಟ್ಟಿದ್ದು, ಇದು ಎಲ್.ಐ.ಜಿ. ಮತ್ತು ಎಂ.ಐ.ಜಿ.ಗೆ ಕೊಟ್ಟ ಸಾಲ ಅಲ್ಲ. ಅವರಿಗೆ ಬೇರೆ ಸ್ಕೀಮ್‌ನಿಂದ ಹಣ ಕೊಟ್ಟು ಮನೆ ಕಟ್ಟಿದ್ದಾರೆ. ಎರಡೂವರೆ ಸಾವಿರದಿಂದ ನಾಲ್ಕು ಸಾವಿರದವರೆಗೆ ಲೋನ್ ಕೊಟ್ಟಿದ್ದು ಇದನ್ನು ಮನ್ನಾ ಮಾಡಬೇಕು. ಏಕೆಂದರೆ ವಿಪಿಧೋದ್ದೇಶ ಸಹಕಾರ ಸಂಘದವರು 600 ಜನರ ಸಾಲ ಮನ್ನಾ ಮಾಡಿದ್ದಾರೆ 1993ರಲ್ಲಿ. ಈಗ ಇರುವಂಥಾದ್ದು ಕೇವಲ 140 ಜನ. ಇದನ್ನು ತಾವು ಖಂಡಿತವಾಗಿ ಮನ್ನಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಈ ವ್ಯವಸ್ಥೆಯನ್ನು ತಾವು ತಮ್ಮ ಎಲ್.ಐ.ಜಿ. ಮತ್ತು ಎಂ.ಐ.ಜಿ. ಜೊತೆ ತುಲನೆ ಮಾಡುವ ಅವಶ್ಯಕತೆ ಇಲ್ಲ. ಇದು ಸೆಪರೇಟ್ ಇಷ್ಯೂ. ಇದು ಒಂದು ಸಣ್ಣ ವಿಷಯ. ನಮ್ಮ ಸರ್ಕಾರ ಖಂಡಿತ ಇದನ್ನು ಮನ್ನಾ ಮಾಡಬಹುದೆಂದು ನನ್ನ ನಂಬಿಕೆ.

ಶ್ರೀ ಖಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೇ, 1985-86ರಲ್ಲಿ ಆ ಕ್ಯಾಷ್ ಲೋನ್ ಸ್ಕೀಮ್ ಜಾರಿಯಲ್ಲಿದೆ. ಆ ಸ್ಕೀಮ್ ಪ್ರಕಾರ that loan has been taken. Now that scheme is not in continuity. The hon.member is requesting that it should be considered as a special case. I will just give an assurance that I will look into the matter seriously ಸ್ಪೆಷಲ್ ಕೇಸ್ ಎಂದು ಕನ್ಸಿಡರ್ ಮಾಡಿ ಲೋನ್ ಮನ್ನಾ ಮಾಡಿ ಎಂದು ಹೇಳುತ್ತಿದ್ದೀರಿ.

ಶ್ರೀ ಕೆ.ವಿಜಯಕುಮಾರ್ ಶೆಟ್ಟಿ: ಮಾನ್ಯ ಅಧ್ಯಕ್ಷರೇ, ಅವರು ಬಂದರು ಗಾರ್ಮೆಂಟ್‌ಗೆ ಜಾಗ

ಕೊಟ್ಟವರು. ಮಾನ್ಯ ಮಂತ್ರಿಗಳು ನೋಡುತ್ತೇನೆಂದು ಆಶ್ವಾಸನೆ ಕೊಟ್ಟರೆ ಪ್ರಯೋಜನ ಇಲ್ಲ. ಈ ದೇಶಕೋಸ್ಕರ ತ್ಯಾಗ ಮಾಡಿದ್ದಾರೆ. ನಾನು ನಿಜವಾಗಿ ಹೇಳುವುದಾದರೆ ನಮ್ಮ ಗಡಿ ಭಾಗದಲ್ಲಿ ಯೋಧರು ಯಾವ ತರಹ ಹೋರಾಟ ಮಾಡುತ್ತಾರೋ ಆ ತರಹ ತಮ್ಮ ಸರ್ವಸ್ವವನ್ನು ಕಳೆದುಕೊಂಡು ನಿರ್ವಸಿತರಾದ ಜನ ಅವರು. ಈಗ ಹೊಸ ಮಂಗಳೂರು ಬಂದರಿನಲ್ಲಿ ಎಷ್ಟು ಆಕ್ಟಿವಿಟೀಸ್ ಆಗುತ್ತದೆ, ರಾಷ್ಟ್ರೀಯ ಪ್ರಗತಿಗೆ ಎಷ್ಟು ಕಾರ್ಯಕ್ರಮ ಆಗುತ್ತಿದೆ ಎನ್ನುವುದು ತಮಗೆ ಗೊತ್ತಿದೆ. ಆದ್ದರಿಂದ ನನ್ನ ಒಂದು ಒತ್ತಾಯ ಕೇವಲ 140 ಜನರದ್ದು. ಅದೂ ಸಣ್ಣ ಪ್ರಮಾಣದ ಲೋನ್ ಅದರಲ್ಲಿ ಅಲ್ಪಸಂಖ್ಯಾತರೇ ಜಾಸ್ತಿ ಇದ್ದಾರೆ. ಇದನ್ನು ಮನ್ನಾ ಮಾಡುವುದಕ್ಕೆ ಸರ್ಕಾರಕ್ಕೆ ಎಂಡಿತವಾಗಿ ಕಷ್ಟವಾಗುವುದಿಲ್ಲ. ಸರ್ಕಾರ ಮನಸ್ಸು ಮಾಡಬೇಕು. ಮಾನ್ಯ ಮಂತ್ರಿಗಳು ಈ ಸಾಲವನ್ನು ಮನ್ನಾ ಮಾಡುತ್ತೇವೆಂದರೆ ನಮ್ಮ ಭಾಗದ ಜನರಿಗೆ ಬಹಳ ಸಂತೋಷವಾಗಬಹುದು.

ಶ್ರೀ ಖಿಮರುಲ್ ಇಸ್ಲಾಂ: ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಈ ಸದನಕ್ಕೆ ನಾನು ಆಶ್ವಾಸನೆ ಕೊಡುತ್ತೇನೆ. seriously I will look into the matter.

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನಗಳ ಸಂಚಾರ.

315(3212)

ಶ್ರೀ ರೇವಣ್ಣ ಹೆಚ್.ಎಂ.(ಮಾಗಡಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ವಾಹನಗಳ ಸಂಚಾರ ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ವಾಹನಗಳ ಸಂಚಾರವನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ?

ಇ) ಸಂಚಾರ ನಿಯಂತ್ರಣಕ್ಕಾಗಿ ಖಾಸಗಿ ವಾಹನಗಳನ್ನು ಬಳಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಯಾವ ಆಧಾರದ ಮೇಲೆ ಈ ಖಾಸಗಿ ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ?

ಉ) ಬಸ್ಸು ನಿಲ್ದಾಣಗಳಲ್ಲಿ ಸಂಚಾರ ನಿಯಂತ್ರಕರು ಇಲ್ಲದೆ ವಾಹನಗಳು ಸಕಾಲಕ್ಕೆ ಸರಿಯಾಗಿ ಓಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?